ಈ ಮನೆಗಳಿಗೆ ಇದುವರೆಗೆ ಎಷ್ಟು ಹಣವನ್ನು ಎಷ್ಟು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ,

ಆ) ಮಾಡಿದ್ದಲ್ಲಿ ಈ ಮನೆಗಳಿಗೆ ಇನ್ನೂ ಎಷ್ಟು ಹಣವನ್ನು ಬಿಡುಗಡೆ ಮಾಡಲು ಬಾಕಿ ಇದೆ,

ಇ) ಈ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಕೋಲಾರ ಮತ್ತು ಚಿಂತಾಮಣಿ ತಾಲ್ಲೂಕುಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ 40 ಮನೆಗಳಂತೆ ಮಂಜೂರಾದ ಮನೆಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರು ನಿಗಮದ ವೆಬ್‌ಸೈಟಿನಲ್ಲಿ ನಮೂದಿಸುವ ಭೌತಿಕ ಮತ್ತು ಅರ್ಥಿಕ ಪ್ರಗತಿಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ ಅದರಂತೆ ಕೋಲಾರ ತಾಲ್ಲೂಕಿಗೆ 7 ಕಂತುಗಳಲ್ಲಿ ರೂ 165 75 ಲಕ್ಷಗಳನ್ನು ಮತ್ತು ಚಿಂತಾಮಣಿ ತಾಲ್ಲೂಕಿಗೆ 3 ಕಂತುಗಳಲ್ಲಿ ರೂ 151 15 ಲಕ್ಷಗಳನ್ನು ಇದುವರೆಗೂ ಬಿಡುಗಡೆ ಮಾಡಲಾಗಿದೆ

ಆ) ಕೋಲಾರ ತಾಲ್ಲೂಕಿಗೆ ನೀಡಿದ ಗುರಿಗೆ ಅನುಗುಣವಾಗಿ ರೂ 288 00 ಲಕ್ಷಗಳು ಬೇಕಾಗಿದ್ದು, ಅದರಲ್ಲಿ ರೂ 165 75 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ರೂ 122 25 ಲಕ್ಷಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ

ಚಿಂತಾಮಣಿ ತಾಲ್ಲೂಕಿಗೆ ನೀಡಿದ ಗುರಿಗೆ ಅನುಗುಣವಾಗಿ ರೂ 272 00 ಲಕ್ಷಗಳು ಬೇಕಾಗಿದ್ದು, ಅದರಲ್ಲಿ ರೂ 151 15 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ರೂ 120 85 ಲಕ್ಷಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ

ಇ) ಪ್ರಗತಿಯನ್ನು ಆಧರಿಸಿ ಗ್ರಾಮ ಪಂಚಾಯಿತಿಗಳಿಗೆ ನೇರವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ ಹಣ ಬಿಡುಗಡೆ ಮಾಡಲಾಗುತ್ತಿದೆ ಗ್ರಾಮ ಪಂಚಾಯಿತಿಗಳು ಮನೆಯ ಪ್ರಗತಿಯನ್ನು ಆಧರಿಸಿ 3 ಅಥವಾ 4 ಹಂತಗಳಲ್ಲಿ ಹಣವನ್ನು ಫಲಾನುಭವಿಗೆ ನೇರವಾಗಿ ಬಿಡುಗಡೆ ಮಾಡಲು ಕ್ರಮ ಕೈಕೊಳ್ಳಲಾಗುತ್ತಿದೆ

562 ಶ್ರೀ ಸುರೇಶ್ ಎಸ್ ಮಾರಿಹಾಳ್ (ಕಿತ್ತೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಮತಕ್ಷೇತ್ರದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಎಷ್ಟು ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು),

ಆ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡುವಾಗ ಅನುಸರಿಸುವ ಮಾನದಂಡವೇನು,

ಇ) ಈ ಯೋಜನೆಗಳ ಕಾಮಗಾರಿಗಳ ಆಯ್ಕೆಯಲ್ಲಿ ಸ್ಥಳೀಯ ಸಂಸದರ ಮತ್ತು ಶಾಸಕರ ಪಾತ್ರವೇನು (ವಿವರ ನೀಡುವುದು)?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) .

ಅ) ಕಿತ್ತೂರು ಮತಕ್ಷೇತ್ರದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಅಂದರೆ 2003–04ನೇ ಸಾಲಿನಲ್ಲಿ ಒಂದು ಕಾಮಗಾರಿಯನ್ನು ಕೈಗೊಳ್ಳಲಾಗಿದೆ ವಿವರ ಈ ರೀತಿ ಇದೆ PMGSY ಹಂತ–3ರಡಿ ಬೈಲಹೊಂಗಲ ತಾಲ್ಲೂಕಿನ ಕಿತ್ತೂರು ಮತಕ್ಷೇತ್ರದಡಿ ಉಗರ್ ಖೋಡ್ ದಿಂದ ಕದರವಳ್ಳಿ ವರೆಗಿನ 5 2 ಕಿಮೀ ಉದ್ದದ ರಸ್ತೆಯನ್ನು ರೂ 70 00 ಲಕ್ಷದ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ

ಆ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಕಾಮಗಾರಿಗಳನ್ನು ಸಮಗ್ರ ಆದ್ಯತಾ ಪಟ್ಟಿ (CUPL) ಅನ್ವಯ ಆಯ್ಕೆ ಮಾಡಲಾಗುತ್ತದೆ ಸಮಗ್ರ ಆಧ್ಯತಾ ಪಟ್ಟಿಯನ್ನು ತಯಾರಿಸುವಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾರ್ಗಸೂಚಿಗಳು ಕೆಳಕಂಡಂತಿದೆ

1 ಪ್ರತಿ ಜಿಲ್ಲೆಯ, ಜಿಲ್ಲಾ ಗ್ರಾಮೀಣ ರಸ್ತೆಗಳ ನಕ್ಷೆಯನ್ನು ತಾಲ್ಲೂಕುವಾರು ತಯಾರಿಸಿ ಈ ನಕ್ಷೆಯಲ್ಲಿ, ಪ್ರತಿ ರಸ್ತೆಯನ್ನು ಗುರುತಿಸಲಾಗುತ್ತದೆ

2 ಈ ನಕ್ಷೆಯನ್ನು ಆಧರಿಸಿ, ಯೋಜನೆಯ ಮಾರ್ಗಸೂಚಿಗಳಂತೆ ಕೋರ್ ನೆಟ್‌ವರ್ಕ್‌ನ್ನು ಗುರುತಿಸಲಾಗುತ್ತದೆ ವಸತಿ ಪ್ರದೇಶವನ್ನು ಕೇಂದ್ರ ಸ್ಥಾನವಾಗಿಟ್ಟುಕೊಂಡು, ಗ್ರಾಮೀಣ ಧ್ರೂರಸ್ತೆ ಅಥವಾ ಮೇಜರ್ ರೂರಲ್ ಲಿಂಕ್‌ಗಳನ್ನು ಗುರುತಿಸಲಾಗುತ್ತದೆ

3 ಈ ರಸ್ತೆಗಳ ಮೇಲ್ಮೈ ಸ್ಥಿತಿ (Pavement Condition Index, PCI) ಮತ್ತು ಫಲಾನುಭವಿ ಗ್ರಾಮಗಳ ಜನಸಂಖ್ಯೆ ಇವುಗಳನ್ನು ಆಧಾರವಾಗಿಟ್ಟುಕೊಂಡು ಆಧ್ಯಾತಾ ಪಟ್ಟಿ ತಯಾರಾಗುತ್ತದೆ

4 ಜಿಲ್ಲೆಯನ್ನು ಒಂದು ಘಟಕವಾಗಿ ಪರಿಗಣಿಸಿ ರಸ್ತೆಗಳಿಗೆ ಆಧ್ಯತಾ ಸಂಖ್ಯೆಗಳನ್ನು ಒದಗಿಸಲಾಗುತ್ತದೆ ಆದ್ಯತಾ ಪಟ್ಟಿಯಲ್ಲಿ ವರ್ಗ–1 ರಲ್ಲಿ ಜೆಲ್ಲಿ

ರಸ್ತೆಗಳು, ವರ್ಗ–2 ರಲ್ಲಿ ಜೆಲ್ಲಿ/ಗ್ರಾವೆಲ್/ಬಾಗಶಃ ಡಾಂಬರೀಕರಿಸಿದ ರಸ್ತೆಗಳು ಹಾಗೂ ವರ್ಗ–3 ರಲ್ಲಿ ಡಾಂಬರೀಕರಣಗೊಂಡ ಹಳೆಯ ರಸ್ತೆಗಳು ಬರುತ್ತವೆ

5 ಈ ಆದ್ಯತಾ ಪಟ್ಟಿಯನ್ನು ರಾಜ್ಯ ಮಟ್ಟದಲ್ಲಿ, ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಸ್ಥಾಯಿ ಸಮಿತಿಯ (SLSC) ಅನುಮೋದನೆಯೊಂದಿಗೆ ಕೇಂದ್ರಕ್ಕೆ ಸಲ್ಲಿಸಲಾಗುತ್ತದೆ

ಕೇಂದ್ರವು ಯೋಜನೆಯ ಮಾರ್ಗಸೂಚಿಯನ್ವಯ ಅರ್ಹವಿರುವ ರಸ್ತೆಗಳಿಗೆ ಅಭಿವೃದ್ಧಿಗಾಗಿ ಅನುಮೋದನೆ ಒದಗಿಸುತ್ತದೆ

ಇ) ಈ ಯೋಜನೆಯಡಿ ಬರುವ ಕಾಮಗಾರಿಗಳ ಆಯ್ಕೆಯನ್ನು CUPL (ಆದ್ಯತಾಪಟ್ಟಿ)ನ ಅನುಸಾರವೇ ಮಂಜೂರಾತಿ ನೀಡಲಾಗುತ್ತದೆ ಈ ಪಟ್ಟಿಯನ್ನು ತಯಾರಿಸುವಾಗ ಸ್ಥಳೀಯ ಸಂಸದರ ಮತ್ತು ಶಾಸಕರ ಹಾಗೂ ಎಲ್ಲ ಜನಪ್ರತಿನಿಧಿಗಳ ಸಲಹೆ, ಸೂಚನೆ ಮತ್ತು ಮಾರ್ಗದರ್ಶನಗಳನ್ನು ಸ್ಥಳೀಯ ವಿಭಾಗಗಳು ಪಡೆಯಬೇಕಾಗಿರುತ್ತದೆ ತಾಲ್ಲೂಕು ಮಟ್ಟದಲ್ಲಿ ಆಯಾ ತಾಲ್ಲೂಕು ಪಂಚಾಯತ್‌ಗಳು ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲಾ ಪಂಚಾಯತ್‌ಗಳು ತಮ್ಮ ಸಾಮಾನ್ಯ ಸಭೆ (General Body Meeting) DRRP ಮತ್ತು CNW ಗಳನ್ನು ಹಾಗೂ CUPL ನ್ನು ಅನುಮೋದಿಸಿಕೊಳ್ಳಬೇಕಾಗಿರುತ್ತದೆ

948 ಶ್ರೀ ಪಾಟೀಲ್ ಎಂ ವೈ . ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಸರ್ಕಾರಿ ವತಿಯಿಂದ ನಡೆಯುತ್ತಿರುವ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆಗಳೆಷ್ಟು,

ಆ) ಹಳೆಯ ಮೈಸೂರಿಗೆ ಹೋಲಿಸಿದಾಗ ಈ ಭಾಗದಲ್ಲಿ ಈ ಕಾಲೇಜುಗಳ ಕೊರತೆ ಇರುವುದು ಸರ್ಕಾರದ ಗಮನದಲ್ಲಿದೆಯಾ,

ಇ) ಇದ್ದಲ್ಲಿ ಅಫಜಲಪುರ ಮತಕ್ಷೇತ್ರವು ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿರುವುದರಿಂದ ಇಲ್ಲಿ ತಾಂತ್ರಿಕ ಶಿಕ್ಷಣದ ಅವಶ್ಯಕತೆಗನುಗುಣವಾಗಿ ಬರುವ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು).

ಅ) ಹೈದರಾಬಾದ್–ಕರ್ನಾಟಕ ಭಾಗದಲ್ಲಿ ಸರ್ಕಾರಿ ವತಿಯಿಂದ ನಡೆಯುತ್ತಿರುವ ಪಾಲಿಟೆಕ್ನಿಕ್ ಕಾಲೇಜುಗಳ ಸಂಖ್ಯೆ–07